ಆ) ಜಿಲ್ಲಾವಾರು ಹಂಚುತ್ತಿದ್ದ ಪಕ್ಷದಲ್ಲಿ ಶೇ. 40 ಜನಸಂಖ್ಯೆ (ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ) ಇರುವ ಜಿಲ್ಲೆಗಳಿಗೂ ಮತ್ತು ಶೇ. 8.27 ಜಿಲ್ಲೆಗಳಿಗೂ ಒಂದೇ ಸಮನೆ ಹಂಚಿದರೇ ಅತಿ ಹೆಚ್ಚಿಗೆ ಜನಸಂಖ್ಯೆಯಿರುವ ಜಿಲ್ಲೆಗಳಿಗೆ ಅನ್ಯಾಯವಾಗುವುದಿಲ್ಲವೇ;

ಇ) ಹಾಗಿದ್ದಲ್ಲಿ ಆಯಾ ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಆಧರಾದ ಮೇಲೆ ಹಂಚಲು 1993-94ನೇ ವರ್ಷದಿಂದಲೇ ಕಾರ್ಯಕ್ರಮ ಕೈಗೊಳ್ಳುವರೇ?

ಶ್ರೀ ಧರ್ಮ ಸಿಂಗ್

(ಸಮಾಜ ಕಲ್ಯಾಣ ಸಚಿವರು)

ಈ ಹಣವನ್ನು ಕರಾರುವಾಕ್ಕಾಗಿ ಜಿಲ್ಲಾವಾರು ರೀತಿಯಲ್ಲಾಗಲೀ ಅಥವಾ ಜನಸಂಖ್ಯೆಯ ಆಧಾರದ ಮೇಲಾಗಲೀ ಹಂಚಲಾಗುತ್ತಿಲ್ಲ. ಆದರೆ ಅವಶ್ಯಕತೆಗೆ ಅನುಗುಣವಾಗಿ ಎಲ್ಲ ಜಿಲ್ಲೆಗಳಿಗೂ ರಾಜ್ಯದ ವಿವಿಧ ಅಭಿವೃದ್ಧಿ ಇಲಾಖೆಗಳ ಮುಖಾಂತರವೂ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್ತಿನ ಮುಖಾಂತರವೂ ಒದಗಿಸಲಾಗುವುದು.

ಉದ್ಭವಿಸುವುದಿಲ್ಲ

ಉದ್ಭವಿಸುವುದಿಲ್ಲ.

ವಿಷಯ :- ಬೆಂಗಳೂರು ನಗರದಲ್ಲಿ ಹೆಚ್ಚು ವಾಹನ ಸಂಚಾರ ಮತ್ತು ಇರುವ ಪ್ರಮುಖ ರಸ್ತೆಗಳನ್ನು ವಿಸ್ತಾರ ಮಾಡುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 174(381)

ಶ್ರೀ ಕೆ.ಲಕ್ಕಣ (ರಾಜಾಜಿನಗರ)

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ಕೆಂಪೇಗೌಡ ರಸ್ತೆ ಎನ್.ಆರ್.ರಸ್ತೆ, ಅವಿನ್ಯೂ ರಸ್ತೆ ಮುಂತಾದ ಕಡೆ ವಾಹನ ಸಂಚಾರ ಮತ್ತು ಜನನಿಬಿಡ ರಸ್ತೆಗಳಿಂದ ನಾಗರೀಕರಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಂತಹ ರಸ್ತೆಗಳನ್ನು ಅಗಲಪಡಿಸಲು ಸರ್ಕಾರ ಉದ್ದೇಶಿಸಿದೆಯೇ?

ಇ) ಆದುವರೆಗೂ ಅಂತಹ ಸಂಚಾರ ಒತ್ತಡವಿರುವ ರಸ್ತೆಗಳಲ್ಲಿ ಯಾವ ರೀತಿ ಸಂಚಾರ ನಿಯಂತ್ರಣ ಮಾಡಲು ಸಾಧ್ಯವೆಂಬುದನ್ನು ಸರ್ಕಾರ ಯೋಚಿಸಿ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಚೌಡರೆಡ್ಡಿ

(ನಗರಾಭಿವೃದ್ಧಿ ಸಚಿವರು)

ಬಂದಿದೆ

ಈಗ ಅಂತಹ ರಸ್ತೆಗಳನ್ನು ಅಗಲಪಡಿಸಲು ಉದ್ದೇಶಿಸಿಲ್ಲ.

ಸಂಚಾರದ ಒತ್ತಡ ಯಾವ ರೀತಿ ಸುಗಮ ಮಾಡಲು ಸಾಧ್ಯವೆಂದು ಪರಿಶೀಲಿಸಲಾಗುತ್ತಿದೆ.